Regd No M 1299 34 th Year ತಾ॥ 23—1—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾತ್ತಾಶಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಚಿತ್ರಾಹಿಕವನ್ನೊಳಗೊಂಡ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸಂಪಾದಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣೆ
| ತಿಂಗಳಿಗೊಂದಾವರ್ತಿ |
ವಾರ್ಷಿಕಚಂದಾ ಅಂಚೆವೆಚ್ಚಸೇರಿ 8 ಆಣೆ

Protect the Cow

ಗೋರಕ್ಷಣೆ ಪಡೆಯಲಿ

ತಾಜಾ ಸಮಾಚಾರ

ಮೈಸೂರು ನಗರದ ಪ್ರಥಮ ನ್ಯಾಯಾಧೀಶರು, ದೇವರಾಜ ಮಾರ್ಕೆಟ್‌ನಲ್ಲಿ ಸೀಲಿಲ್ಲದೆ ಇರುವ ಬಟ್ಟೆನಲ್ಲಿ ಈರುಳ್ಳಿ ಮಾರಾಟ ಮಾಡುತ್ತಿದ್ದರೆಂದು ರಾಮರಾವ್ ಎಂಬವರಿಗೆ ರೂ. 20 ದಂಡ ವಿಧಿಸಿದರು. ತಿಮ್ಮೇಗೌಡನೆಂಬಾತ ಸೀಲಿಲ್ಲದೆ ಇರುವ ಪಾವಿನಲ್ಲಿ ಹಾಲು ಅಳೆಯುತ್ತಿದ್ದನೆಂದು ರೂ. 50 ದಂಡ ವಿಧಿಸಲ್ಪಟ್ಟಿತು.

ಪಡಿತರ ತಪ್ಪಿಸಕೂಡದೆಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ತಿಳಿಸಿರುವರು.

ಕಾಲೇಜ್ ಸಂಘಗಳಲ್ಲಿ ರಾಜಕೀಯಕ್ಕೆ ಅವಕಾಶವಿರಕೂಡದೆಂದು ಪ್ರೊ॥ ವಾಡಿಯು ನಿನ್ನೆ ಸಂಜೆ ಮೈಸೂರು ಮಹಾರಾಜ ಕಾಲೇಜ್‌ನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಪಂ॥ ನೆಹರು ನಿನ್ನೆ ದೆಹಲಿಗೆ ಬಂದಾಗ ನೇಪಾಳ ದೊರೆಗಳು ಕೂಡ ಅವರನ್ನು ಸ್ವಾಗತಿಸಲು ಬಂದಿದ್ದರು.

ಕೊರಿಯಾ ಸಮರ ಸಮಾಪ್ತಿ ಸಲಹೆ ಬಗೆಗೆ ಚೀನದಿಂದ ಬಂದ ಉತ್ತರದಿಂದ ನಾವು ತೀವ್ರ ನಿರಾಶನಾಗಿರುವೆ - ಹೀಗೆಂದು ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಟ್ರಗ್ವಿಲೈ ನ್ಯೂಯಾರ್ಕಿನಲ್ಲಿ ನಿನ್ನೆ ತಿಳಿಸಿದ್ದಾರೆ.

ಆಹಾರ ಪಾತಿಯಲ್ಲಿ ಇದುವರೆಗೆ 8 ಕೋಟಿ ರೂ ನಷ್ಟ ಸಂಭವಿಸಿದೆಯೆಂದು ಶ್ರೀ ಕೆ ಸಿ. ರೆಡ್ಡಿಗಳು ಬೆಂಗಳೂರಿನಲ್ಲಿ ಸಮಾವೇಶವಾಗಿರುವ ಮೈಸೂರು ಶಾಸನ ಸಭೆಯಲ್ಲಿ ತಿಳಿಸಿರುವರು.

ಕಳೆದ ವರ್ಷ ನಾಗ್ಪುರದಲ್ಲಿ ಸಿಡುಬಿನಿಂದ ಸತ್ತವರ ಸಂಖ್ಯೆ ಸಾವಿರ.

ಮೂರು ವಾರಗಳ ತನಕ ಶ್ರೀ ಜಯಪ್ರಕಾಶರು ಮದರಾಸಿನಲ್ಲಿರುವದಾಗಿ ವರದಿಯಾಗಿದೆ.

ದಿವ್ಯವಾಣಿ

ಸತ್ಯವನ್ನು ಎಷ್ಟು ಕಳಕ್ಕೊತ್ತಿದರೂ ಅದು ಮತ್ತೆ ಮೇಲೆ ಏಳಲೇಬೇಕು.

— ಸ್ವಾಮಿ ರಾಮತೀರ್ಥ

ಸ್ವೀಕಾರ

ಸೇವಾಸದನ : (ದ್ವೈಮಾಸಿಕ ಪತ್ರಿಕೆ) ಸಂಪಾದಕರು : ಶ್ರೀ ಚಿದಂಬರಸ್ವಾಮಿಗಳು. ಚಿದಂಬರಾಶ್ರಮ, ಗುಬ್ಬಿ. ವಾರ್ಷಿಕ ಚಂದಾ : ರೂ. 3-8-0.

ಶ್ರೀ ಚಿದಂಬರ ಸ್ವಾಮಿಗಳು ಮೈಸೂರಿನ ಪ್ರಜೆಗಳಿಗೆ ಚಿರಪರಿಚಿತರು. ಹಿಂದೆ ಗೀತಾ ಪ್ರಚಾರಣಿ ಸಭೆಯು ಅಸ್ತಿತ್ವದಲ್ಲಿ ಹಲವಾರು ಉಪನ್ಯಾಸಗಳನ್ನು ಮಾಡಿರುವರು ಕಳೆದ ತಿಂಗಳಿನಲ್ಲಿ ವಾಣೀವಿಲಾಸ ವೆಯಿಷ್ಣವದಲ್ಲಿ ಇವರ ಅಧ್ಯಾತ್ಮ ಉಪನ್ಯಾಸಗಳನ್ನು ಕೇಳುವ ಸುಯೋಗವು ಮೈಸೂರಿನ ಪ್ರಜೆಗಳಿಗೆ ಒದಗಿತ್ತು. ಇವರ ಪತ್ರಿಕೆಯು ಹಿಂದೂಮತದ ಆಧ್ಯಾತ್ಮಿಕ ಸಾರರೂಪವಾದ ವಿಷಯಗಳನ್ನೊಡಗೊಂಡಿದೆ. ಮುಮುಕ್ಷುಗಳಿಗೆ ಈ ಪತ್ರಿಕೆಯಲ್ಲಿಯ ವಿಷಯಗಳು ಆದರಣಗಳೂ ಸಾಧನಯೋಗ್ಯಗಳೂ ಆಗಿರುವುವು.

ಶ್ರೀ ಜಯಚಾಮರಾಜೇಂದ್ರ ಸ್ಟೇಡಿಯಂನಲ್ಲಿ 26 ನೆ ತಾ॥ ಬೆಳಿಗ್ಗೆ 9 ಗಂಟೆಗೆ ಮಹಾರಾಜರ ಅಧ್ಯಕ್ಷತೆಯಲ್ಲಿ ರಿಪಬ್ಲಿಕ್ ದಿನಾಚರಣೆ ಪ್ರಯುಕ್ತ ಸಿವಿಲ್ ವಿಲಿಟರಿ ಪೆರೇಡ್ ಏರ್ಪಾಟಾಗಿದೆ.

ಧ್ವನಿಗಳನ್ನು ಪ್ರತಿಧ್ವನಿಸುವಂತೆ ಮಾಡುವದರಿಂದ ಕುರುಡರಿಗೆ ದಾರಿಯನ್ನು ನೋಡಿಸಬಲ್ಲ ರಾಡಾರ್ ಯಂತ್ರವನ್ನು ಹೊಸದಾಗಿ ಕಂಡುಹಿಡಿದಿರುವರು ಈ ಯಂತ್ರದ ಸಹಾಯದಿಂದ ಕುರುಡನು ಕೋಣೆಯಲ್ಲಿರುವ ಬೆಂಚು, ಕುರ್ಚಿ ಇತ್ಯಾದಿಗಳನ್ನು ತಪ್ಪಿಸಿಕೊಂಡು ಸುಲಭವಾಗಿ ನಡೆಯಬಲ್ಲನು. ಇದು ದೊಡ್ಡ ಟಾರ್ಚ್ ಲೈಟಿಸಂತಿರುತ್ತದೆ. ಎಸ್ಟೆಯ ಮೇಲಿರುವ ಕಂಭಗಳು, 5-6 ಗಜಗಳಲ್ಲಿರುವ ಮರಗಳು, ಗಿಡಗಳು ಮೊದಲಾದವನ್ನು ಗುರ್ತಿಸಿ ಒಲ್ಲವರಾಗಿರುತ್ತಾರೆ.

ಕಾಂಗ್ರೆಸಿನಲ್ಲಿ ಸ್ವಲ್ಪ ವಿರೋಧ ?

95 ಕೋಟಿ ರೂ. ಮೌಲ್ಯದ ಧಾನ್ಯವನ್ನು ಭಾರತಕ್ಕೆ ಕೊಡುವ ಕುರಿತು ಕಾಂಗ್ರೆಸ್ಸನ್ನು ಆಡಳಿತಕೇಳುವದೆಂದು ಅಮೇರಿಕ ಅಧಿಕಾರಿಗಳು ವಾಷಿಂಗ್ಟನ್ನಲ್ಲಿ ತಿಳಿಸಿದರು ; ಪಂ॥ ನೆಹರು ಕೊರಿಯಾ ನೀತಿಯಿಂದ ಕಾಂಗ್ರೆಸಿನಲ್ಲಿ ಸ್ವಲ್ಪ ವಿರೋಧ ಬರಬಹುದೆಂದು ಅಧಿಕಾರಿಗಳು ತಿಳಿಸಿದರು ಮಾನವೀಯತೆ ಹಾಗೂ ಕಮ್ಯುನಿಸಂ ಪ್ರತಿಬಂಧ ದೃಷ್ಟಿಯಿಂದ ತಮಗೆ ಈ ಬಗೆಗೆ ಬೆಂಬಲವಿದೆಯೆಂದವರು ತಿಳಿಸಿದರು

ಮೈಸೂರು ಸಂಸ್ಥಾನದ ವೆಗ್ಯುಲೆಬೆಡ ಮಾರ್ಕೆಟ್ ಪ್ರಗತಿ ಕುರಿತು ಸರ್ಕಾರಿ ಪ್ರಕಟಣೆ ಒಂದಿದೆ

ಥಕ್ಕರ್‌ಬಾಪ ನಿಧನದ ಬಗ್ಗೆ ಶ್ರೀ ಕೆ. ಸಿ ರೆಡ್ಡಿ ಸಂತಾಪಸಿದ್ದಾರೆ.

ಇನ್ನೊಂದೆರಡು ವರ್ಷಗಳಲ್ಲಿ ಆಹಾರ ಪರಿಸ್ಥಿತಿ ಸಧಾರಣಬಹುದೆಂದು ಶ್ರೀ ಕೆ. ಸಿ ರೆಡ್ಡಿಗಳು ಜುಂಜನಕಟ್ಟೆಯಲ್ಲಿ ತಿಳಿಸಿರುವರು

ವಿಶ್ವಸಂಸ್ಥೆಯಲ್ಲಿ ಈ ತಿಂಗಳ ಕಡೆ ಭಾಗದಲ್ಲಿ ಕಾಶ್ಮೀರದ ಚರ್ಚೆ ಆರಂಭವಾಗಬಹುದೆಂದು ಕರಾಚಿ ವಾರ್ತೆ

ಹುಬ್ಬಳ್ಳಿ ನಿಲ್ದಾಣಕ್ಕೆ ಹಮಿನಾರು ವೈಮಲು ದೂರವಿರುವ ಸಂಸಿಯಲ್ಲಿ ಬೆಂಗಳೂರು-ಪೂನ ವೇಲ್‌ಸ ಹೊಸ ಜೋಗಿ ಉರುಳಿ ಹದಿನೆಂಟು ಮಂದಿ ಗಾಯಗೊಂಡು ಮೂವರ ಸ್ಥಿತಿ ತೀವ್ರವಿದೆಯೆಂದು ವಾರ್ತೆ

ಕಳೆದ ವರ್ಷ ಅಮೇರಿಕ ವಿಶ್ವವಿದ್ಯಾನಿಲಯಗಳಲ್ಲಿ 5 ಲಕ್ಷ ಜನರು ಗ್ಯಾಜುಯೇಟುಗಳಾದರು.

ನ್ಯೂಯಾರ್ಕ್ : ವಿಶ್ವಸಂಸ್ಥೆ ಪತ್ರಿಕಾ ಕೇಂದ್ರವನ್ನು 39 ನೆ ಮಹಡಿ ಇರುವ ಹೊಸ ಕಟ್ಟಡದಲ್ಲಿ ತೆರೆಯಲಾಗಿದೆ

ವಿಶ್ವಸಂಸ್ಥೆ ಮಹಾ ಕಾರ್ಯದರ್ಶಿ ಟ್ರಿಗ್ವಿಲೈ ನ್ಯೂಯಾರ್ಕಿನಲ್ಲಿ ಹೇಳಿಕೆಯೊತ್ತು ಯುರೋಪಿನಲ್ಲಿ ಸಮರ ಭಯ ಕಡಿಮೆಯಾಗಿರುವಂತಾಗಿ ತಿಳಿಸಿರುವರು.

ಮಧ್ಯ ಪ್ರದೇಶದಲ್ಲಿ ವಾನ ಪ್ರತಿಬಂಧ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಲಾಗುತ್ತಿದೆ ವಾನ ಪ್ರತಿಬಂಧ ಬೇಡ ಆದರೆ ಆಳತೆ ಬರಲಿ ಎಂದು ಅನೇಕ ಸಲಹೆಗಳು ಬಂದಿರುವದಾಗಿ ನಾಗ್ಪುರ ವರದಿ.

ಲಾಹೋರ್‌ನ ಶ್ರೇಷ್ಠ ನ್ಯಾಯಾಲಯದಲ್ಲಿ ಖಾಕ್ಸಾರ ನಾಯಕ ಅಲ್ಲಮಷ್ರುಕಿ ತನ್ನ ದಸ್ಯಗಿರಿ ವಿರುದ್ಧ ಹೇಬಸ್ ಕಾರ್ಪಸ್ ಅರ್ಜಿಸಿದ್ದಾರೆ.

ತೆಲಗಾಣದಲ್ಲಿ ಶಸಾಸ್ತ್ರ ಪೋಲೀಸರನ್ನು ಹೆಚ್ಚಿಸವ ಸಲುವಾಗಿ ಭಾರತ ಸರ್ಕಾರ ಹೈದರಾಬಾದಿಗೆ ಅಧಿಕ ಪೋಲೀಸರನ್ನು ಕಳಿಸಲಿದೆ

ಶ್ರೇಷ್ಠ ನ್ಯಾಯಾಲಯು ಬಾಲೂಸಾರಿಗೆ ಮರಣ ದಂಡನೆಯನ್ನು ಖಾಯಂ ಮಾಡಿತೆಂದ ಬೆಂಗಳೂರು ವಾರ್ತೆ ವೆಂಕೂಸಾ ಕೊಲೆ ಮಾಡಿದ ಅಪಾದನೆ ಮೇಲೆ ಸೆಷನ್ ನ್ಯಾಯಾಧಿಸರು ಅವನಿಗೆ ಮರಣದಂಡನೆ ವಿಧಿಸಿದ್ದರು. ಬಾಲೂಸಾ ಶ್ರೇಷ್ಠ ನ್ಯಾಯಾಲಯದಲ್ಲಿ ಅಪೀಲು ಹೂಡಿದ್ದ.

ಹಿಂದು ವರ್ಷದ ಹಿಂದೆಯೇ ಕೋರಿಯ ಸಮರದ ಒಗ್ಗೆ ಚೀನ-ರಷ್ಯ ಒಪ್ಪಂದಕ್ಕೆ ಬಂದಿತ್ತೆಂದು ಸ್ಯೂ ಅಮೇರಿಕ ಮಕ್ಕುಯಿ ಪ್ರಕಟಿಸಿದೆಯೆಂದು ಸಾಮ್ರಿಯಾರ್ಕ್ ವಾರ್ತೆ.

ಕೆಂಪು ಚೀನದವರ ತೀವ್ರ ಹೋರಾಟದ ಪರಿಣಾಮವಾಗಿ ಕೊರಿಯದಿಂದ ಬ್ರಿಟಿಷ್ ಪಡೆಗಳು ಹಿಂದೆ ಸರಿಯುವೆ.

ಅ ಹೊ ರ ವ್ಯೂ, ಕಾ ಂ ಗ್ರೆ ಸ್ಸೂ

(ಮುಂದುವರಿದುದು)

ಆಹಾರದ ವಿಷಯದಲ್ಲಿ ಪ್ರತಿ ಮನುಷ್ಯನೂ ಒಂದು ನಿಬಂಧನೆಯನ್ನು ಇಟ್ಟುಕೊಂಡಿರತಕ್ಕದ್ದು. 'ಬಾಯಿಗೆ ಹಾಕಿಕೊಂಡದ್ದು ಒಳಕ್ಕೆ ಹೋಗದೇ?' ಎಂದಲ್ಲಿ ಹೋಗುತ್ತದೆ' ನೋಡಿ ಮನೆಯಲ್ಲಿ ಯಾರಾದರೂ ಸತ್ತುಹೋಗಿದ್ದಲ್ಲಿ "ಆ ಹೆಣವನ್ನು ವಿಲೇವಾರಿ ಮಾಡಿ ಬರುವ ವೇಳೆಗೆ ಬಹಳ ಹೊತ್ತಾಗುತ್ತದೆ. ಆದದ್ದರಿಂದ ತಿಂಡಿಯನ್ನು ತಿಂದು ಎತ್ತಿಕೊಂಡು ಹೋಗಬಹುದು." ಎಂದೆಂದೂ ಕೊಳ್ಳುವವರು ಕೂಡ ಇರಬಹುದು ಹೀಗೆ ಮಾಡುವುದು ಯಾವ ಬಗೆಯ ತಪ್ಪು ಅಲ್ಲವೆಂದು ಶಾಸನ ಮಾಡುವ ಮಹನೀಯರಿಗೆ ಕಾಲವು ಇದು. ಇದು ಅಯಾಯ ಜಾತಿಗಳಲ್ಲಿ ಅವರವರ ಪದ್ಧತಿಗಳನ್ನನುಸರಿಸಿ ಇರುತ್ತದೆ ದಾರಿಯಲ್ಲಿ ಹೋಗುವಂಥವನಿಗೆ ಅಂಸ್ಥೆಗಳಲ್ಲಿ ಮಾಲೆ ವಡೆಗಳನ್ನು ತಿನ್ನುತ್ತಿದ್ದಲ್ಲಿ ಅವಾಸನೆಯು ಮೂಗಿಗೆ ಬಂದಲ್ಲಿ, ಇಂಥಾ ಒಡೆಗಳನ್ನು ತಿನ್ನದ ಜೀವನವು ನಿಷ್ಪ್ರಯೋಜನವೆಂದುಕೊಂಡು ಅದರ ಆಕರ್ಷಣೆಗೆ ಒಳಗಾಗಿ ಈ ಕಡೆ ಆ ಕಡೆ ನೋಡಿ— ಯಾರು ತಯಾರ್ಮಾಡಿದರೇನು ? ಚೆನ್ನಾಗಿದೆ ಎಂದು, ಅದನ್ನು ಕೊಂಡು ತಿಂದವನನ್ನು ಕಂಡು, ತನ್ನ ನಾಲಿಗೆಯನ್ನು ವಶದಲ್ಲಿಟ್ಟುಕೊಳ್ಳಲಾರದವನು, ಯಾವ ನೀತಿಸಿದ್ಧಾಂತವಿಲ್ಲದೆ ಅದಕ್ಕೆ ದಾಸನಾಗುವನು, ಘಸನಾಗುವನೇ ? ಭಾರತ ಜಾತಿಯು ಆಹಾರಕ್ಕಾಗಿ ಜೀವಿಸುವುದಲ್ಲವೆಂದು ಜೀವಿಸಲು ಸಾಕಾದಷ್ಟು ಮಾತ್ರ ತಿನ್ನುವಂಥಾದ್ದೆಂದೂ ಪ್ರಖ್ಯಾತಿಯುಂಟು ಅನಸ್ಯ ವಮಲಸಹಿತ ನಾಶಗೊಳಿಸುವ ಪದ್ಧತಿಗಳು ಇಂದು ಹೊರಪಟ್ಟಿರುವವಾಗಲೀ ಮತ್ತೆ ಏನೂ ಇಲ್ಲ. ಶರೀರದ ಆರೋಗ್ಯಕ್ಕಾಗಿ ಸಿದ್ಧವಿಹಿತ ಸಮಯಕ್ಕೆ ಭೋಜನ ಮಾಡಬೇಕಾಗಿ ಬರುತ್ತದೆ ; ಸಕಾಲಕ್ಕೆ ಭೋಜನ ಮಾಡುವುದು ಒಳ್ಳೇದೇ ಆಗಲಿ ಎಲ್ಲೆಂದಲ್ಲಿ ಊಟಮಾಡಲು ಏರ್ಪಾಡು ಮಾಡಿಕೊಂಡು, ಅದು ಎಂಥಾ ಕಶ್ಮಲವಾದ ಕೈಗಳಿಂದ ಬರುತ್ತಿರುವುದೋ ಎಂಬ ಯೋಚನೆಯೂ ಇಲ್ಲದೆ ಊಟಮಾಡುವಿಕೆಯು ಸರಿಯಿಲ್ಲ ಈ ಕಶ್ಮಲಗಳು ಕೇವಲ ಬಾಹ್ಯವಾದವುಗಳಲ್ಲ ಶರೀರಾಂತರ್ಗತ ಅವಯವಗಳಿಗೂ ಸೇರಿಕೊಂಡಿರುವದೆಂದು ಗ್ರಹಿಸುವುದಕ್ಕೆ ಬುದ್ಧಿವಂತರು.

[ವಿಕ್ಕಿದ್ದು ನಾಳೆ ಸಂಚಿಕೆಯಲ್ಲಿ

ಅ ಪೇ ರಾ 18—1—51 ರಿಂದ

ಪ್ರಕಾಶ್, ಗುಲ್ಶನ್, ಬಚ್ಚೂ, ಶಿರಾಜ್, ಮನ್ಸೂರ್, ಇಂದ್ರಬಾಲಿ

ಪಾತ್ರವಹಿಸಿರುವ ಸೊಗಸಾದ ಹಿಂದಿ ಚಿತ್ರ

ಫ್ಲ ಯಿ ಂ ಗ್ ಎ ಕ್ಸ್ ಪ್ರೆ ಸ್

ರಣಜಿತ್ ಯಶಸ್ವಿ 2 ನೇ ವಾರ

Nirala ನಿ ರಾ ಲ

ಪಾತ್ರ— ಮಧುಬಾಲಾ, ದೇವಾನಂದ, ಯಾಕೂಬ್, ಮಜರ್‌ಖಾನ್

ಇತರ ಚಿತ್ರಗಳಲ್ಲಿ ಕಾಣದಿರುವ ಅನೇಕ ಸನ್ನಿವೇಶಗಳು ಈ ಹಿಂದಿ ಚಿತ್ರದಲ್ಲಿವೆ.

ಪ್ರತಿ ದಿನ 3 ಪ್ರದರ್ಶನಗಳು

ಮುಂದಿನ ಬದಲಾವಣೆ ಜಲ್ತೆ ದೀಪ್ ಪಾತ್ರ—ನಿಮ್ಮಿ, ಕುಲದೀಪ್

ಬೆಳಗಿನ ಪ್ರದರ್ಶನ — 26—1—51 ರಿಂದ — 3 ದಿನಗಳು

ಸೂರೈಯಾ ಪಾತ್ರವಹಿಸಿರುವ ಸುಂದರ ಹಿಂದಿ ಚಿತ್ರ — ನಾ ಟ ಕ್

Edited, Printed and Published by M. S. Krishna Rao at the Satyavadi Press Chamrajpuram Mysore

ಉಡ್‌ಲ್ಯಾಂಡ್ ಶಿ ಸು

ಜಯಪ್ರದ 2 ನೇ ವಾರ

ವೀ ರ ಬಬ್ರುವಾಹನ

ಶಶಿಕಪೂರ್, ಪೃಥ್ವಿರಾಜ್, ಜಾನಕಿದಾಸ್ ಅಭಿನಯಿಸಿರುವ ಅತ್ಯದ್ಭುತ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 26—1—51 ರಿಂದ 3 ದಿವಸಗಳು

ಕ್ರಿಲೋಕ ಕಪೂರ್, ಮಜರ್‌ಖಾನ್, ಡೇವಿಡ್ ಅಭಿನಯಿಸಿರುವ

ಸೊಬಗಿನ ಹಿಂದಿ ಚಿತ್ರ — ರಾ ಜ ರಾ ಣಿ

"Five Hundred Million Of Them — All Expendable"

from the daily newspaper THE WASHINGTON POST, Washington, D.C., U.S.A.

ರಷ್ಯಾದ ಆಶೆಯನ್ನು ನುಂದುವುಮಾಡಲು ಜೈನಾದ ಕೋಟ್ಯಾಂತರ ಜನರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಸ್ಟಾಲಿನ್, ಮಾಲೊಟೋವ್, ರಷ್ಯಾದ ದಂಡನಾಯಕರು ಕಾತರ ಯೋಜನೆಯನ್ನು ಚರ್ಚಿಸುತ್ತಿರುವ ವ್ಯಂಗಚಿತ್ರ, ಅಮೇರಿಕಾದ ವಾಷಿಂಗ್ಟನ್ ಪೋಸ್ಟಿನಲ್ಲಿ ಪ್ರಕಟವಾಗಿದೆ.

ಸ ತ್ಯ ವಾ ದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

For Quality Printing

L. N. Press

Sivarampet, Mysore